2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.

**ಎಸ್.ಸಿ.5027/2022**

ದಿಃ15.09.2025
ಚಾಸಾ-9 ಪ್ರಾಸಾ-10

| | |
|---|---|
| ಹೆಸರು | : ಮುತ್ತುರಾಜು |
| ತಂದೆಯ ಹೆಸರು | : ಕುಮಾರ್ |
| ವಯಸ್ಸು | : 39 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ | : ಚುಂಚಿ ಕಾಲೋನಿ |

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)**
**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ಸಾಕ್ಷಿಯು ದಿಃ26.05.2020ರ ಆರೋಪಿಗಳು ತೋರಿಸಿದ ಸ್ಥಳ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು.

ದಿಃ26.05.2020ರಂದು ಚಾಸಾ-1ರವರ ಮನೆಯ ಬಳಿ ನಿಪಿ-4ಕ್ಕೆ ಸಹಿ ಮಾಡಿರುತ್ತೇನೆ. ನನ್ನ ಜೊತೆ ನಿಪಿ-4ಕ್ಕೆ ಚಾಸಾ-10 ಮತ್ತು 11ರವರು ಸಹಿ ಮಾಡಿರುತ್ತಾರೆ. ನಾನು ನಿಪಿ-4ಕ್ಕೆ ಸಹಿ ಮಾಡುವಾಗ ಸಮಯ ಸಂಜೆ 4-00 ರಿಂದ 5-00 ಗಂಟೆ ಆಗಿತ್ತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರು ಸ್ಥಳ ತೋರಿಸಿದಂತೆ ಪೊಲೀಸರು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಪೊಲೀಸರು ನಿಪಿ-4ನ್ನು ಗಲಾಟೆಯಾದ ವಿಚಾರಕ್ಕೆ ಸಂಬಂಧಪಟ್ಟಂತೆ ಜರುಗಿಸಿರುತ್ತಾರೆ. ಸಾಕ್ಷಿ ಮುಂದುವರೆದು ಗಲಾಟೆಯು ಯಾರ ಯಾರ ನಡುವೆ ನಡೆದಿರುತ್ತದೆ ಎಂದು ತಿಳಿದಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ಸಾಕ್ಷಿಯು ದಿಃ26.05.2020ರ ಅಮಾತನು ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು.

ನಾನು ನಿಪಿ-5ಕ್ಕೆ ಚಾಸಾ-1ರವರ ಮನೆಯ ಬಳಿ ಸಹಿ ಮಾಡಿರುತ್ತೇನೆ. ಪೊಲೀಸರು ನನ್ನನ್ನು ಬೇರೆ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಕಲ್ಲು, ಚಾಕು, ರಾಡು, ಗಾಜಿನ ಚೂರುಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕಲ್ಲು, ಚಾಕು, ರಾಡು, ಮತ್ತು ಗಾಜಿನ ಚೂರುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂಒ-4 ರಿಂದ 7 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

ಚಾಸಾ-1ರವರ ಮನೆ ಬಳಿ ಆರೋಪಿತರು ಹಾಗೂ ಚಾಸಾ-1ರವರ ನಡುವೆ ನಡೆದ ಗಲಾಟೆಯ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ.

ದಿಃ26.05.2020ರಂದು ಸಂಜೆ 5-15 ರಿಂದ 6-15 ಗಂಟೆ ಸಮಯದಲ್ಲಿ ಪೊಲೀಸರು ನನ್ನನ್ನು ಚಿಕ್ಕಸೇತುವೆ ಬಳಿ 4ನೇ ಆರೋಪಿ ಸ್ಥಳ ತೋರಿಸಿದಂತೆ ನಿಪಿ-5ರಂತೆ ಪಂಚನಾಮೆ ಜರುಗಿಸಿದ ನಂತರ ಸಹಿ ಮಾಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು ಎಂಒ-5 ರಿಂದ 7 ವಸ್ತುಗಳನ್ನು ಮಾತ್ರ ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಎಂ.ಎಂ. ಆರೋಪಿತರ ಪರ ವಕೀಲರಿಂದ</u>**

ನಾನು ಏಳನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ಪೊಲೀಸರು ತಮ್ಮ ದಾಖಲೆಯಲ್ಲಿ ನಾನು ಮಾಡುವ ಉದ್ಯೋಗದ ಬಗ್ಗೆ ಏನು ಬರೆದುಕೊಂಡಿರುತ್ತಾರೆ ಎಂಬುದರ ಬಗ್ಗೆ ನನಗೆ ತಿಳಿದಿರುವುದಿಲ್ಲ. ಚಾಸಾ-10 ಶಿವಪ್ಪರವರು ಚುಂಚಿ ಕಾಲೋನಿ ಗ್ರಾಮದ ವಾಸಿ ಹಾಗೂ ಚಾಸಾ-11 ಸುರೇಶ್‌ರವರು ನಲ್ಲಹಳ್ಳಿ ಗ್ರಾಮದ ವಾಸಿಯಾಗಿರುತ್ತಾರೆ.

ದಿಃ26.05.2020ರಂದು ನಮ್ಮ ಸಂಬಂಧಿಕರಾದ ಸಿಡ್ಲಯ್ಯರವರು ಕಬ್ಬಾಳಮ್ಮನ ದೇವಸ್ಥಾನದಲ್ಲಿ ಪೂಜೆ ಇಟ್ಟುಕೊಂಡಿದ್ದರಿಂದ, ಆ ದಿನ ನಾನು ಊಟಕ್ಕೆ ಹೋಗಿದ್ದೆನು. ನಾನು ಮತ್ತು ಚಾಸಾ-11ರವರು ಚುಂಚಿ ಕಾಲೋನಿಯಿಂದ ಚಾಸಾ-10ರವರಿಗೆ ಸೇರಿದ ಕಾರಿನ ಮೂಲಕ ಮೂರು ಜನ ಕಬ್ಬಾಳಮ್ಮ ದೇವಸ್ಥಾನಕ್ಕೆ ಹೋಗಿರುತ್ತೇವೆ. ಸದರಿ ಕಾರಿನ ನಂಬರನ್ನು ಈಗ ಹೇಳಲು ಆಗುವುದಿಲ್ಲ. ನಾನು, ಚಾಸಾ-10 ಮತ್ತು 11ರವರು ನಮ್ಮ ಗ್ರಾಮದಿಂದ ಸಾತನೂರು ಮೂಲಕ ಕಬ್ಬಾಳು ಗ್ರಾಮಕ್ಕೆ ಹೋಗಿ, ನಂತರ 3-00 ರಿಂದ 3-30 ಗಂಟೆ ಸಮಯದಲ್ಲಿ ಊಟ ಮುಗಿಸಿಕೊಂಡು ಚಾಸಾ-10 ಶಿವಪ್ಪರವರ ವೈಯಕ್ತಿಕ ಕೆಲಸ ಇದ್ದುದರಿಂದ ಸಾತನೂರು ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಮಧ್ಯಾಹ್ನ 3-30 ರಿಂದ ಸಂಜೆ 6-30 ಗಂಟೆಯವರೆಗೆ ನಾವು ಪೊಲೀಸ್ ಠಾಣೆಯಲ್ಲಿಯೇ ಇದ್ದೆವು. ಪೊಲೀಸರ ಸೂಚನೆ ಮೇರೆಗೆ ಆರೋಪಿತರು ಚಾಸಾ-1ರವರ ಮನೆ ಬಳಿ ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ. ಚಾಸಾ-1ರವರಿಗೆ ಸೇರಿದ ಮನೆಯ ಬಾಗಿಲು ಯಾವ ದಿಕ್ಕಿಗೆ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸಾತನೂರು ಕನಕಪುರ ಮುಖ್ಯರಸ್ತೆ ಕಡೆಗೆ ಬರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಚಾಸಾ-1ರವರ ಮನೆಗೆ ಎಷ್ಟು ಗೇಟುಗಳು ಇರುತ್ತವೆ ಎಂಬುದನ್ನು ಈಗ ನನಗೆ ಹೇಳಲು ನೆನಪಿಲ್ಲ. ಚಾಸಾ-1ರವರ ಮನೆಯ ಸುತ್ತಲೂ ಕಾಂಪೌಂಡ್ ಇರುವುದನ್ನು ನಾನು ಗಮನಿಸಿರುವುದಿಲ್ಲ. ಚಾಸಾ-1ರವರ ಮನೆಯ ಮುಂಭಾಗದಲ್ಲಿ ಬಾಗಿಲಿನ ಅಕ್ಕಪಕ್ಕದಲ್ಲಿ ಎಷ್ಟು ಕಿಟಕಿಗಳು ಬರುತ್ತವೆ ಎಂಬುದರ ಬಗ್ಗೆ ನಾನು ನೋಡಿ ಗಮನಿಸಿರುವುದಿಲ್ಲ. ಚಾಸಾ-1ರವರ ಮನೆಯ ಕಂಪೌಂಡ್ ಒಳ ಆವರಣದಲ್ಲಿ ಕಾರ್ ಶೆಡ್ ಇರುವುದನ್ನು ನಾನು ನೋಡಿ ಗಮನಿಸಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಚಾಸಾ-1ರವರ ಮನೆಯ ಮುಂಭಾಗದಲ್ಲಿ ಬಿದ್ದಿದ್ದ ಗಾಜಿನ ಚೂರುಗಳನ್ನು ವಶಪಡಿಸಿಕೊಂಡಿದ್ದು, ಅವು ಯಾವ ಕಿಟಕಿಯ ಗಾಜುಗಳು ಎಂದು ನನಗೆ ನೆನಪಿಲ್ಲ. ಚಾಸಾ-1ರವರ ಮನೆಯ ಮುಂಭಾಗದಲ್ಲಿ ಮೇಲ್ಚಾವಣಿ ಇರುವುದನ್ನು ನಾನು ನೋಡಿ ಗಮನಿಸಿರುವುದಿಲ್ಲ. ಚಾಸಾ-1ರವರ ಮನೆಯ ದಕ್ಷಿಣ ದಿಕ್ಕಿಗೆ ಕನಕಪುರ ಮೈಸೂರು ಮುಖ್ಯರಸ್ತೆ

ಬರುತ್ತದೆ ಎಂದರೆ ಸರಿ. ಚಾಸಾ-1ರವರ ಮನೆಯ ಚೆಕ್ಕು ಬಂಧಿ ಹಾಗೂ ಅಳತೆಯನ್ನು ಪಂಚನಾಮೆ ಜರುಗಿಸುವ ಕಾಲದಲ್ಲಿ ಹೇಳಿ ಬರೆಯಿಸಿರುವುದಿಲ್ಲ ಎಂದರೆ ಸರಿ. ನಾನು ಚಾಸಾ-1ರವರ ಮನೆ ಬಳಿ ಹೋದಾಗ ಎಷ್ಟು ಜನ ಸೇರಿದ್ದರು ಎಂದು ಈಗ ಹೇಳಲು ಆಗುವುದಿಲ್ಲ.

ಪೊಲೀಸರಿಗೆ ನಿಪಿ-5ರ ಸ್ಥಳವನ್ನು ಯಾರು ತೋರಿಸಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ. ಪೊಲೀಸರು ನಿಪಿ-5ನ್ನು ಜರುಗಿಸುವ ಸ್ಥಳಕ್ಕೆ ಎಂಒ-4 ರಿಂದ 7ನ್ನು ತಂದಿದ್ದರು ಎಂದರೆ ಸರಿ. ನಿಪಿ-5ಕ್ಕೆ ಪೊಲೀಸರ ಸೂಚನ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪೊಲೀಸರು ನಿಪಿ-4 ಮತ್ತು 5ನ್ನು ಬರೆದ ನಂತರ ಸಹಿ ಮಾಡಿರುತ್ತೇನೆ ಎಂದರೆ ಸರಿ. ಘಟನೆ ನಡೆಯಿತೆಂದು ಹೇಳಲಾದ ಸಮಯದಲ್ಲಿ ಕೋವಿಡ್ ಸಾಂಕ್ರಮಿಕ ರೋಗ ಇದ್ದುದರಿಂದ ಸರ್ಕಾರವು ಲಾಕ್ ಡೌನ್ ಆದೇಶವನ್ನು ಹೊರಡಿಸಿದ್ದರಿಂದ ಯಾವುದೇ ದೇವಸ್ಥಾನದ ಪೂಜೆ ಕಾರ್ಯಕ್ರಮಗಳು ನಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-10ರವರ ಮನವಿ ಮೇರೆಗೆ ಪೊಲೀಸ್ ಠಾಣೆಗೆ ಹೋಗಿ ನಿಪಿ-4 ಮತ್ತು 5ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ನಿಪಿ-5ನ್ನು ನಾನು ಹೇಳಿ ಬರೆಯಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ಮತ್ತು 5ಕ್ಕೆ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4 ಮತ್ತು 5ರಂತೆ ಪಂಚನಾಮೆ ಜರುಗಿಸುವ ಕಾಲಕ್ಕೆ ಆರೋಪಿ-1 ರಿಂದ 5ರವರು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಎಂಒ-4 ರಿಂದ 7ನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ತಿಳಿಯದಿದ್ದರೂ ಸಹ ಪೊಲೀಸರ ಸೂಚನೆ ಮೇರೆಗೆ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.